ಕರ್ನಾಟಕದ ಆಧ್ಯಾತ್ಮಿಕ ಪರಂಪರೆ

# ಪರಮ ಅನುಭಾವಿ, ಕವಿಪುಂಗವ: ಶ್ರೀಜಿನಸೇನಾಚಾರ್ಯರು

ಗುಡಿಬಂಡೆ ಪೂರ್ಣಿಮಾ

**ಮ**ಹಾಕಾವ್ಯ ಸ್ವರೂಪದ ಸ್ಪಷ್ಟ ತಿಳಿವಳಿಕೆ ಇದ್ದ ಶ್ರೀಜಿನಸೇನಾಚಾರ್ಯರು 'ಸೇನ' ಜೈನ ಮುನಿ ಸಂಘಕ್ಕೆ ಸೇರಿದ ಆಚಾರ್ಯರು. ೧೮೦೦ ವರ್ಷಗಳ ಹಿಂದೆ ಅರ್ಹದ್ಬಲಾಚಾರ್ಯರ ಕಾಲದಲ್ಲಿ 'ಸಿಂಹ', 'ಸೇನ', 'ದೇವ' ಎಂಬ ಹೆಸರಿನ ಸಂಘಗಳಿದ್ದು, ವೀರಸೇನಾಚಾರ್ಯರ ಪರಮಶಿಷ್ಯರಾಗಿದ್ದ ಜಿನಸೇನಾಚಾರ್ಯರು 'ಸೇನ' ಸಂಘಕ್ಕೆ ಸೇರಿದವರೆಂಬುದು ಇತಿಹಾಸ. ಇವರ ದೀಕ್ಷಾಗುರು ಜಯಸೇನರು.

ಜಿನಸೇನರ ಕವಿತಾಶಕ್ತಿ ದ್ರಾಕ್ಷಾಪಾಕದಂತೆ ಎಂಬುದು ವಿದ್ವಾಂಸರ ನುಡಿ. ಜೈನರಲ್ಲಿ ಮೊತ್ತಮೊದಲು ಪುರಾಣಕಾವ್ಯವನ್ನು ರಚಿಸಿದವರು ಅವರು ಎಂಬ ಅಭಿಮತ ಅಲ್ಲಲ್ಲಿ ಇದ್ದರೂ ತೀರ್ಥಂಕರರ ಕಾಲದಿಂದ ಕಾವ್ಯ, ಪುರಾಣ ರಚನೆ ಪರಂಪರೆಯಾಗಿ ಬಂದಿದೆ ಎಂದು ಪಂಡಿತರತ್ನ ಶ್ರೀ ಎರ್ತೂರು ಶಾಂತಿರಾಜ ಶಾಸ್ತ್ರಿಗಳು ಅಭಿಪ್ರಾಯ ಪಡುತ್ತಾರೆ.

ಜೈನ ಮುನಿಗಳು ಒಂದೇ ಕಡೆ ವಾಸ ಮಾಡುವವರಲ್ಲವಾದ್ದರಿಂದ ಅವರಿಗೆ ಒಂದೇ ಸ್ಥಳ ನಿಗದಿತಗೊಳಿಸಲು ಸಾಧ್ಯವಾಗದು. ಆದರೂ ಅವರ ಕೃತಿಗಳಲ್ಲಿ ಬರುವ ಊರುಗಳ ಪ್ರಸ್ತಾಪದಿಂದ, ಜಿನಸೇನಾಚಾರ್ಯರು ಕರ್ನಾಟಕಕ್ಕೆ ಸೇರಿದವರೆಂದೂ, ರಾಜ ನೃಪತುಂಗ ಅಥವಾ ಅಮೋಘವರ್ಷನ ಗುರುವಾಗಿದ್ದರಿಂದ, ಕ್ರಿ.ಶ. ೮–೯ ನೇ ಶತಮಾನದ ನಡುವಣ ಕಾಲ ಇವರ ಜೀವಿತಾವಧಿಯೆಂದೂ ತೀರ್ಮಾನಿಸಬಹುದು.

ಆಚಾರ್ಯ ಜಿನಸೇನರು 'ವರ್ಧಮಾನ ಪುರಾಣ', 'ಪಾರ್ಶ್ವಾಭ್ಯುದಯ' ಎಂಬ ಕೃತಿಗಳನ್ನು ರಚಿಸಿದ್ದಾರೆ. ಆಗ ಅವರ ವಯಸ್ಸು ೮೪ ಎಂದು ವಿದ್ವಾಂಸರು ಹೇಳುತ್ತಾರೆ. ನಂತರವೇ ಅವರ ಶ್ರೇಷ್ಠ ಕೃತಿಯಾದ 'ಮಹಾಪುರಾಣ' ಅಥವಾ 'ಪೂರ್ವಪುರಾಣ' ವನ್ನು ಈ ಮುಪ್ಪಿನ ವಯಸ್ಸಿನಲ್ಲಿ ಆರಂಭಿಸಿ, ಸುಮಾರು ಹತ್ತು ಸಾವಿರ ಶ್ಲೋಕಗಳನ್ನು ರಚಿಸಿ ದಿವಂಗತರಾದರು. ಅನಂತರ ಈ ಕೃತಿಯನ್ನು ಪೂರೈಸಿದವರು ಅವರ ಶಿಷ್ಯರಾದ ಗುಣಭದ್ರಾಚಾರ್ಯರು.

ಜಿನಸೇನಾಚಾರ್ಯರು ಜೈನಸಿದ್ಧಾಂತದ ವಿಷಯದಲ್ಲಿ ತಜ್ಞರಾಗಿದ್ದಂತೆ, ಸಂಸ್ಕೃತ ಭಾಷೆಯ ಉದ್ದಾಮ ಪಂಡಿತರೂ, ಮಹಾಕವಿಯೂ ಆಗಿದ್ದರು. ಅನುಭಾವಿಕ ವಿಷಯಗಳನ್ನು, ತತ್ತ್ವಾನ್ವೇಷಣೆ, ಮುಕ್ತಿ, ಕರ್ಮವಿಚಾರಗಳನ್ನು ಕಾವ್ಯಾಂತರ್ಗತವಾಗಿ ಸುಭಗಶೈಲಿಯಲ್ಲಿ ನವರಸ ಸ್ವಾದಿಷ್ಟವಾಗಿ ಅಭಿವ್ಯಕ್ತಿಸುವ ಕಲೆ ಅವರಲ್ಲಿತ್ತು. ಇದಕ್ಕೆ ಅವರ ಲಭ್ಯ ಕೃತಿಗಳಾದ ಪಾರ್ಶ್ವಾಭ್ಯುದಯ ಮಹಾಪುರಾಣ, ಜಯಧವಲಾ ಟೀಕಾ ಇವುಗಳೇ ಪ್ರತ್ಯಕ್ಷ ಸಾಕ್ಷಿ. ಅವರಿಂದಲೇ ರಚಿತವಾಗಿದೆ ಎನ್ನಲಾಗಿರುವ ವರ್ಧಮಾನ ಪುರಾಣ ಸದ್ಯ ಲಭ್ಯವಿಲ್ಲ.

ಮಹಾಕವಿ ಕಾಳಿದಾಸನ ಖಂಡಕಾವ್ಯ 'ಮೇಘದೂತ'ಕ್ಕೆ ಉತ್ತರವಾಗಿ ಪಾರ್ಶ್ವಾಭ್ಯುದಯ ರಚಿತವಾಗಿದೆ. ೩೬೪ ಮಂದಾಕ್ರಾಂತಾ ವೃತ್ತಗಳಿರುವ ಈ ಕಾವ್ಯದಲ್ಲಿ ಸಂಪೂರ್ಣ 'ಮೇಘದೂತ' ಮಿಳಿತವಾಗಿ ಸಮಸ್ಯಾಪೂರ್ತಿಯ ರೂಪ ತಳೆದು, ಆ ಪ್ರಕಾರದ ಆದ್ಯ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಭಾಷಾಶೈಲಿಯಿಂದಲೂ ಈ ಕಾವ್ಯ ಶ್ರೇಷ್ಠವಾಗಿದೆ. ಪ್ರೊ. ಕೆ. ಬಿ. ಪಾಠಕರ ಅಭಿಪ್ರಾಯದಲ್ಲಿ "ಇದು ಮೇಘದೂತಕ್ಕಿಂತಲೂ ಅಧಿಕತರ ಯೋಗ್ಯತೆಯುಳ್ಳದ್ದು."

ಜಯಧವಲಾ ಟೀಕಾ ತಮ್ಮ ಗುರು ವೀರಸೇನರ ಅಪೂರ್ಣ ಕಾರ್ಯವನ್ನು ಕೈಗೆತ್ತಿಕೊಂಡು ಅದೇ ಶೈಲಿಯಲ್ಲಿಯೇ ಪೂರ್ಣಗೊಳಿಸಿ, ಕೃತಕೃತ್ಯರಾಗಿರುವ ಟೀಕಾಕೃತಿಯಾಗಿದೆ. ಸಂಸ್ಕೃತ ಪ್ರಾಕೃತ ಮಿಶ್ರಿತ ಶೈಲಿಯಲ್ಲಿ ಪದಾರ್ಥಗಳ ಸೂಕ್ಷ್ಮ ವಿಶ್ಲೇಷಣೆಯನ್ನು ಜಿನಸೇನಾಚಾರ್ಯರು ಅಲ್ಲಿ ಮನೋಹರವಾಗಿ ಚಿತ್ರಿಸಿದ್ದಾರೆ. ತಾವೇ ಸಂಶಯ ಎತ್ತಿ, ಉತ್ತರ ನೀಡುವ ವಿವೇಚನಾ ಪದ್ಧತಿ ಈ ಕೃತಿಯ ವೈಶಿಷ್ಟ್ಯತೆ. "ಸಾಹಿತ್ಯ" ಶಬ್ದಕ್ಕೆ **'ಸಹಿತಸ್ಯ ಭಾವಃ ಸಾಹಿತ್ಯಂ'**–ಪರಸ್ಪರಾಪೇಕ್ಷಗಳಾದ ಸಮಾನ ವಸ್ತುರೂಪಗಳು ಏಕಕಾಲದಲ್ಲಿ ಒಂದು ಕ್ರಿಯೆಯೊಡನೆ ಸಮನ್ವಯವಾಗುವಿಕೆಯೇ ಸಾಹಿತ್ಯ – ಎಂಬ ಮಾತಿನೊಡನೆ ಆರಂಭವಾಗುವ ಪೂರ್ವ ಪುರಾಣದಲ್ಲಿ ತ್ರಿಷಷ್ಟಿಶಲಾಕಾಪುರುಷರಾದ ಪ್ರಥಮ ತೀರ್ಥಂಕರ, ಪ್ರಥಮ ಚಕ್ರಿ, ಪ್ರಥಮ ಕೇವಲಿಗಳ (ಆದಿದೇವ, ಭರತ–ಬಾಹುಬಲಿ) ಕಥೆ ಸವಿಸ್ತಾರವಾಗಿ ಬಂದಿದೆ.

ಕವಿತಾಚಾತುರ್ಯ, ಅರ್ಥಗಾಂಭೀರ್ಯ, ಪದಲಾಲಿತ್ಯ, ರಸಾಲಂಕಾರ ಸೌಷ್ಠವ – ಈ ಎಲ್ಲ ಅಂಶಗಳನ್ನೂ ಒಳಗೊಂಡು ಪರಂಪರಾಗತವಾದ ಮಹಾಕಾವ್ಯದ ಲಕ್ಷಣಗಳಿಗನುಸಾರವಾಗಿ ರಚಿತಗೊಂಡಿರುವ ಈ ಮಹಾಕಾವ್ಯ, ಅಷ್ಟೇ ಸಹಜವಾಗಿ ನೀತಿತತ್ತ್ವ ಬೋಧೆ, ಸಂಸಾರ ಸ್ವರೂಪ, ಲೋಕಗಳು, ಕರ್ಮಸ್ವರೂಪ, ವೈರಾಗ್ಯ ತತ್ತ್ವ ವಿಚಾರ ಮತ್ತು ಮುಕ್ತಿ ಲಕ್ಷಣಗಳನ್ನೂ ಒಳಗೊಂಡಿದೆ. ಈ ಮಹಾಕಾವ್ಯದ ಕೆಲವು ರತ್ನಗಳು ಹೀಗಿವೆ:

**ಯಥಾ ಗುಣಧನಾಃ ಸಂತೋ ದುರ್ಜನಾ ದೋಷವಿತ್ತಥಾ ।**
**ಸ್ವಂದನಗೃಹ್ಣತಾಂ ತೇಷಾಂ ಕಃ ಪ್ರತ್ಯರ್ಥಿಬುಧೋಜನಾಃ ॥**

ಸತ್ಪುರುಷರು ಗುಣವೆಂಬ ದ್ರವ್ಯ ಉಳ್ಳವರು, ದುರ್ಜನರು ದೋಷವೆಂಬ ಹಣವುಳ್ಳವರು. ತಮ್ಮ ತಮ್ಮ ದ್ರವ್ಯಗಳನ್ನು ತೆಗೆದುಕೊಳ್ಳುತ್ತಿರುವ ಆ ಸುಜನ ದುರ್ಜನರನ್ನು ಯಾವ ವಿವೇಕಿಯು ತಾನೇ ತಡೆಯುತ್ತಾನೆ? ಅವರವರ ಸ್ವಭಾವ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ.

**ಕುರೂಪ ಬೃಂಹಣಂ ಧರ್ಮೇ ಮಲಸ್ಥಾನ ನಿಗೂಹನೈಃ ।**
**ಮಾರ್ಗಾಚ್ಚಲತಿ ಧರ್ಮಸ್ಥೇ ಸ್ಥಿತೀಕರಣಮಾಚರ ॥**

ಆಸಕ್ತಿಯಿಂದ ಮತ್ತು ಅಜ್ಞಾನದಿಂದ ಧಾರ್ಮಿಕರಲ್ಲಿ ಉಂಟಾಗುವ ದೋಷಗಳನ್ನು ಎಣಿಸಬೇಡ. ಧರ್ಮಭ್ರಷ್ಟರನ್ನು ಉಪದೇಶದಿಂದ ಪುನಃ ಸನ್ಮಾರ್ಗದಲ್ಲಿರಿಸು.

**ಸಾಧವೋ ಮುಕ್ತಿಮಾರ್ಗಸ್ಯ ಸಾಧನೇಽರ್ಪಿತಧೀಧನಾಃ ।**
**ಲೋಕಾನುವೃತ್ತಿ ಸಾಧ್ಯಾಂಶೋ ನೈಷಾಂ ಕಶ್ಚನ ಪುಷ್ಕಲಃ ॥**

ಸಾಧುಗಳು ಮೋಕ್ಷಮಾರ್ಗವನ್ನು ಸಾಧಿಸುವಲ್ಲಿ ತಮ್ಮ ಬುದ್ಧಿಯೆಂಬ ದ್ರವ್ಯವನ್ನು ಅರ್ಪಿಸಿದ್ದಾರೆ. ಇವರಿಗೆ ಜನರ ಮೆಚ್ಚುಗೆಯಂತೆ ನಡೆದು ಸಾಧಿಸಿಕೊಳ್ಳಬೇಕಾದ ಯಾವ ಹೆಚ್ಚಿನ ಪ್ರಯೋಜನವೂ ಇಲ್ಲ.

**ಭವಂತು ಸುಖಿನಃ ಸರ್ವೇ ಸತ್ತ್ವಾ ಇತ್ಯೇವ ಕೇವಲಂ ।**
**ಯತೋ ಯತಂತೇ ತೇ ನೈಷಾಂ ಯತಿತ್ವಂ ಸನ್ನಿರುಚ್ಯತೇ ॥**

ಮಹಾತ್ಮರು ಲೋಕದಲ್ಲಿ ಸಮಸ್ತ ಪ್ರಾಣಿಗಳೂ ಸುಖಿಗಳಾಗಿರಲಿ ಎಂದು ಇಚ್ಛಿಸುತ್ತ ಉಪದೇಶಿಸುವುದರಿಂದ ಹಾಗೂ ಯಥಾರ್ಥ ತತ್ತ್ವವನ್ನು ತಿಳಿದಿರುವುದರಿಂದ, ಅವರಿಗೆ 'ಯತಿ' ಎಂಬ ಹೆಸರು ಬಂದಿದೆ.

---

ಬೆಂಗಳೂರಿನ ನಿವಾಸಿಯಾದ ಲೇಖಿಕರು ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಪ್ರಕಟಣ ವಿಭಾಗದ ಮುಖ್ಯಸ್ಥೆಯಾಗಿದ್ದಾರೆ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ.

ಕವಿಯಾಗಿ ಜೈನ ತತ್ತ್ವಗಳ ಅಪಾರ ಜ್ಞಾನವಿದ್ದಂತೆ, ಯತಿಯಾಗಿ, ಭಗವತ್ ಜಿನಸೇನಾಚಾರ್ಯರಿಗೆ ಆ ಸ್ಥಿತಿಯ ಸ್ಪಷ್ಟ ಗೋಚರ ಜ್ಞಾನ ವಿದ್ದುದರಿಂದ ಅವರು ಪರಿಪಕ್ವ ಮನದ ಮಾಗಿದ ಫಲವಾಗಿ, ತಮ್ಮ ಉಜ್ವಲವಾದ ಕೃತಿಗಳನ್ನು ಲೋಕಾರ್ಪಣೆ ಮಾಡಿದ್ದಾರೆ ಎನ್ನಬಹುದು.

ಮುಕ್ತಿನಲ್ಲಿ ಅವರಿಂದ ರಚಿತವಾದ ಈ ಪೂರ್ವಪುರಾಣದ ಕಥಾವಸ್ತುವು ಆದಿ ತೀರ್ಥಂಕರ (ಜನ್ಮಾಂತರಗಳಲ್ಲಿ ಜೀವ ಮಾಗಿ ಭದ್ರ ನೆಲೆಗೆ ತಲುಪಿದ ಸ್ಥಿತ್ಯಂತರ ನಿರೂಪಣೆ), ಆದಿ ಚಕ್ರೇಶ್ವರ (ಆಡಳಿತ ಸ್ವರೂಪದ ನೇರ ಮತ್ತು ಯಥಾರ್ಥ ನಿರೂಪಣೆ) – ಇವು ಗಳನ್ನು ಆಧರಿಸಿದ್ದು ಅತ್ಯಂತ ಮಹತ್ವಪೂರ್ಣವಾಗಿ, ಜಿನಾಗಮ, ಲೌಕಿಕ ಎರಡನ್ನೂ ಬೆಳಗಿಸಿದ ಕೀರ್ತಿಗೆ ಶ್ರೀಜಿನಸೇನಾಚಾರ್ಯರು ಪಾತ್ರರಾಗಿದ್ದಾರೆ. ಇಂತಹ ಯತಿಶ್ರೇಷ್ಠರನ್ನು ಪಡೆದ ಕನ್ನಡ ಜನತೆ ಧನ್ಯವಾಗಿದೆ. ✪

---

## ದಿವ್ಯಸ್ಮೃತಿಪ್ರಭ

**ಸಾವನ್ನು ಸ್ವಾಗತಿಸಿದ ಸಂನ್ಯಾಸಿಗಳು:** ಸ್ವಾಮಿ ಆದ್ಯಾನಂದರು ರಾಮಕೃಷ್ಣ ಮಹಾಸಂಘದ ಚಂಡೀಘರ್ ಕೇಂದ್ರದ ಅಧ್ಯಕ್ಷರಾಗಿದ್ದರು. ಅವರು ತಮ್ಮ ಹಾಸ್ಯಪ್ರವೃತ್ತಿಗೆ ಹೆಸರಾಗಿದ್ದರು. ಯಾವಾಗಲೂ ಹಾಸ್ಯ ಮಾಡುತ್ತ, ಎಲ್ಲರನ್ನೂ ನಗಿಸು ತ್ತಿದ್ದರು. ಪ್ರತಿನಿತ್ಯ ರಾತ್ರಿ ಊಟವಾದ ಮೇಲೆ ಸಂನ್ಯಾಸಿ ಬ್ರಹ್ಮಚಾರಿ ಗಳೆಲ್ಲರೂ ಸೇರಿ ಯಾವುದಾದರೂ ಪುಸ್ತಕವನ್ನು ಓದುವುದು ನಮ್ಮ ಎಲ್ಲಾ ಆಶ್ರಮಗಳಲ್ಲಿರುವ ಪದ್ಧತಿ. ಒಂದು ದಿನ ರಾತ್ರಿಯ ತರಗತಿಯಲ್ಲಿ ಸ್ವಾಮಿ ಆದ್ಯಾನಂದರು ಎಲ್ಲರನ್ನೂ ಉದ್ದೇಶಿಸಿ ಹೇಳಿದರು: "ಇಂದು ರಾತ್ರಿ ನಾನು ಪ್ರಾಣ ಬಿಡುತ್ತೇನೆ." ಆಗ ಅವರ ಆರೋಗ್ಯ ಚೆನ್ನಾಗಿಯೇ ಇತ್ತು. ಆದುದರಿಂದ ಅವರ ಸುತ್ತ ಕುಳಿತಿದ್ದ ಸಾಧುಬ್ರಹ್ಮಚಾರಿಗಳು ಅದನ್ನೂ ಒಂದು ಹಾಸ್ಯದ ಮಾತಿರಬೇಕೇನೋ ಎಂದು ಭಾವಿಸಿದರು. ಆದರೆ ರಾತ್ರಿ ಮಲಗಿಕೊಂಡವರು ಮಾರನೆಯ ದಿನ ಬೆಳಗ್ಗೆ ಏಳಲೇ ಇಲ್ಲ. ರಾತ್ರಿ ನಿದ್ರೆಯಲ್ಲಿಯೇ ಅವರ ಪ್ರಾಣ ಹೊರಟು ಹೋಗಿತ್ತು.

**ಸ್ವಾಮಿ ಶಾರದಾನಂದರ ಸೇವಾಮನೋಭಾವ:** ಒಂದು ದಿನ ಮಧ್ಯಾಹ್ನದ ವಿಶ್ರಾಂತಿಯ ಸಮಯ. ಒಬ್ಬ ಸಂನ್ಯಾಸಿ ಸ್ವಾಮಿ ಶಾರದಾನಂದರು ಎಲ್ಲಿಗೋ ಹೊರಟಿರುವುದನ್ನು ನೋಡಿದರು. ವಿಚಾರಿಸಿದಾಗ, "ಸ್ವಲ್ಪ ಕೆಲಸವಿದೆ" ಎಂದರು. ಸಂನ್ಯಾಸಿಗೆ ಕುತೂಹಲ. ಸ್ವಾಮಿ ಶಾರದಾನಂದರನ್ನೇ ಹಿಂಬಾಲಿಸಿದರು. ಸ್ವಾಮೀಜಿ ನಡೆದುಕೊಂಡು ಒಂದು ಕೊಳಚೆಗೇರಿಗೆ ಹೋದರು. ಅಲ್ಲಿನ ಒಂದು ಮನೆಯನ್ನು ಹೊಕ್ಕರು. ಹಿಂಬಾಲಿಸುತ್ತಿದ್ದ ಸಂನ್ಯಾಸಿಯೂ ಇಣುಕಿ ನೋಡಿದರು. ಅಲ್ಲಿದ್ದ ಒಂದು ಚಿಕ್ಕ ಕೋಣೆಯಲ್ಲಿ ಅಸ್ಥಿಪಂಜರದಂತೆ ಇದ್ದ ವ್ಯಕ್ತಿಯೊಬ್ಬನು ಕೆಮ್ಮುತ್ತ ಮಲಗಿದ್ದನು. ಸ್ವಾಮೀಜಿ ನೇರ ಹೋದವರೇ ಅವನ ಎದೆಯ ಮೇಲೆ ಕೈಯಿರಿಸಿದರು. "ಹೇಗಿದ್ದೀಯಾ?" ಎಂದು ಕಳಕಳಿಯಿಂದ ಕೇಳಿದರು. ಆ ವ್ಯಕ್ತಿಯೂ ಕೆಮ್ಮುತ್ತಲೇ, "ಹೇಗೆ ತಾನೇ ಚೆನ್ನಾಗಿರಲಿ?" ಎಂದು ಉತ್ತರಿಸಿದನು. ಆಗ ತುಂಬು ಸ್ನೇಹದಿಂದ ಸ್ವಾಮಿ ಶಾರದಾ ನಂದರು ಹೇಳಿದರು: " ಆದರೆ, ಮೊದಲಿಗಿಂತ ನೀನು ಚೆನ್ನಾಗಿರುವಂತೆ ಕಾಣುತ್ತಿದೆಯಲ್ಲಾ. ಔಷಧಿಯನ್ನು ಸರಿಯಾಗಿ ತೆಗೆದುಕೊಳ್ಳುತ್ತಿರುವೆ ತಾನೆ? ಹಣ್ಣುಗಳು ಮುಗಿದುಹೋಗಿವೆಯೆಂದು ತೋರುತ್ತದೆ." ಅವನೆಂದನು: "ಔಷಧಿ ಕುಡಿಯುತ್ತಿದ್ದೇನೆ. ಹಣ್ಣು ತಿನ್ನುತ್ತಿದ್ದೇನೆ. ಇಷ್ಟಾದರೂ ಈ ರೋಗದಿಂದ ಪಾರಾಗಿ ಉಳಿಯುವುದಿಲ್ಲವೆಂದು ನನಗೆ ಗೊತ್ತು." ಅದಕ್ಕೆ ಶಾರದಾನಂದರು ಹೀಗೆ ಹೇಳಿದರು: "ಯಾರು ನಿನಗೆ ಹಾಗೆ ಹೇಳಿದರು? ನೀನು ಸಂಪೂರ್ಣ ಗುಣಮುಖನಾಗುವೆ. ಈ ಔಷಧಿ ಮತ್ತು ಹಣ್ಣುಗಳನ್ನು ಇಲ್ಲೇ ಇಟ್ಟು ಹೋಗುತ್ತಿದ್ದೇನೆ. ಸರಿಯಾಗಿ ತೆಗೆದುಕೋ." ಅವರ ಮಾತುಗಳನ್ನು ಕೇಳಿ ಅಳುತ್ತ ಅಳುತ್ತ ಅವನು ಹೇಳಿದನು: "ಮಹಾರಾಜ್, ನೀವು ಮನುಷ್ಯರಲ್ಲ. ನೀವು ಒಬ್ಬ ದೇವತೆ. ಈ ರೋಗಕ್ಕೆ ಹೆದರಿಕೊಂಡು ನನ್ನ ಸಂಬಂಧಿಕ ರೆಲ್ಲರೂ ನನ್ನನ್ನು ಬಿಟ್ಟು ಹೊರಟುಹೋಗಿದ್ದಾರೆ. ನೀವು ಇಷ್ಟೊಂದು ಧೈರ್ಯವಾಗಿ ನನ್ನ ಹತ್ತಿರ ಬಂದು ಕುಳಿತುಕೊಳ್ಳುತ್ತೀರಿ. ಅದಲ್ಲದೆ ನನ್ನ ಔಷಧಿ ಮತ್ತು ಆಹಾರದ ವ್ಯವಸ್ಥೆಯನ್ನು ಮಾಡಿದ್ದೀರಿ."

ಹೊರಗಡೆ ಕಿಟಕಿಯಿಂದ ಇದನ್ನು ನೋಡುತ್ತಿದ್ದ ಆ ಯುವ ಸಂನ್ಯಾಸಿಗೆ ಇನ್ನು ಅಲ್ಲಿರಲಾಗಲಿಲ್ಲ. ಅವರು ಮನೆಯೊಳಗೆ ಹೋಗಿ ಸ್ವಾಮಿ ಶಾರದಾನಂದರ ಕಾಲಿಗೆ ಎರಗಿದರು. ಅಳುತ್ತ ಹೇಳಿದರು: "ಮಹಾರಾಜ್, ನಾನು ಮಹಾಪರಾಧಿ. ನಿಮ್ಮ ಮೇಲೆ ನಾನು ಸಂಶಯ ಪಟ್ಟೆ. ದಯವಿಟ್ಟು ನನ್ನನ್ನು ಕ್ಷಮಿಸಿಬಿಡಿ." ಅವರನ್ನು ಕಂಡು ಶಾರದಾ ನಂದರಿಗೆ ಆಶ್ಚರ್ಯ. ಆದರೂ ಶಾಂತರಾಗಿ ಅವರು ಹೇಳಿದರು: " ಸಂಶಯವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೆಯೇ ನಿಜಸಂಗತಿಯನ್ನು ತಿಳಿದುಕೊಂಡು ಒಳ್ಳೆಯದನ್ನೇ ಮಾಡಿದೆ. ಈ ರೀತಿಯೇ ಇರಬೇಕು." ✪

---

## ಚಿಂತನ ಪ್ರಭ

### ಸುಖದ ರಹಸ್ಯ

ಮನುಷ್ಯ ಸುಖಾನ್ವೇಷಿ. ಸುಖವಾಗಿರಬೇಕೆಂಬುದೇ ಪ್ರತಿಯೊಬ್ಬನ ಅಪೇಕ್ಷೆ. ಆದರೆ ಸುಖದ ನೆಲೆ ಯಾವುದೆಂಬುದು ಮಾತ್ರ ಯಾರಿಗೂ ಗೊತ್ತಿಲ್ಲ. ಸುಖವನ್ನು ಯಾರೂ ನಮಗೆ ಕೊಡುವುದಿಲ್ಲ. ಅದು ನಾವೇ ಪಡೆದುಕೊಳ್ಳಬೇಕಾದ ಒಂದು ಸ್ಥಿತಿ. ಸುಖ ಯಾವುದರಿಂದ ಬರುತ್ತದೆಂದು ಖಚಿತವಾಗಿ ಹೇಳಲು ಬರುವುದಿಲ್ಲ. ಎಲ್ಲರಿಗೂ ಅವರವರದೇ ಆದ ಸುಖದ ಕಲ್ಪನೆಗಳಿರುತ್ತವೆ. ಆದ್ದರಿಂದ ಸುಖದ ಸಾರ್ವತ್ರೀಕರಣ ಸಾಧ್ಯವಾಗುವುದಿಲ್ಲ. ಒರಿಸ್ಸಾದ ಕವಿಮಿತ್ರರೊಬ್ಬರು ಒಂದು ಪ್ರಸಂಗ ಹೇಳಿದರು. ಅವರು ಒಬ್ಬ ಮಾನವಶಾಸ್ತ್ರಜ್ಞರನ್ನು ಆದಿವಾಸಿಗಳ ನೆಲೆಯೊಂದಕ್ಕೆ ಕರೆದುಕೊಂಡು ಹೋಗಬೇಕಾಯಿತಂತೆ. ಹಾಗೆ ಹೋದಾಗ ಬೆಳಗಿನ ಹತ್ತು ಹನ್ನೊಂದು ಘಂಟೆ ಸಮಯ. ಆದಿವಾಸಿ ಹುಡುಗರು ದೊಡ್ಡ ಮರದ ನೆರಳಿನಲ್ಲಿ ಮಲಗಿ ನಿದ್ರಿಸತೊಡಗಿದ್ದರು. ಮಾನವಶಾಸ್ತ್ರಜ್ಞರಿಗೆ ತುಂಬ ಅಚ್ಚರಿಯಾಯಿತು. ದುಡಿಯಬೇಕಾದ ಬೆಳಗಿನ ಈ ಹೊತ್ತಿನಲ್ಲಿ ಆ ತರುಣರು ನಿದ್ರಿಸುತ್ತಿದ್ದುದು ಅವರಿಗೆ ಸರಿಕಾಣಲಿಲ್ಲ. "ನೀವೇಕೆ ಈ ವೇಳೆಯಲ್ಲಿ ಕೆಲಸ ಮಾಡಬಾರದು?" ಎಂದು ಕೇಳಿದರು. ಒಬ್ಬ ತರುಣ "ಯಾಕೆ?" ಎಂದ. "ಹೆಚ್ಚಿಗೆ ದುಡಿಯಲು" ಎಂದರು ಆ ವಿದ್ವಾಂಸರು. "ದುಡಿದು ಏನು ಮಾಡುವುದು?" ಎಂದು ಅವನು ಕೇಳಿದ. ಮಾನವಶಾಸ್ತ್ರಜ್ಞರು ಆ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ. ಅವರು ಅರ್ಥಶಾಸ್ತ್ರದ ಒಂದು ಉಪನ್ಯಾಸ ವನ್ನೇ ಕೊಟ್ಟರು. ಕಷ್ಟ ಪಡಬೇಕು, ಹೆಚ್ಚು ದುಡಿಯಬೇಕು, ಸಂಪತ್ತನ್ನು ಗಳಿಸಬೇಕು, ಮುಂದೆ ವಿಶ್ರಾಂತಿ ತೆಗೆದುಕೊಳ್ಳಬೇಕು. ಸಂಪತ್ತನ್ನು ಬಳಸಬೇಕು, ಸುಖ ಪಡಬೇಕು– ಇದು ಅವರ ಉಪನ್ಯಾಸದ ಸಾರಾಂಶ. ಇವೆಲ್ಲವೂ ಆ ಆದಿವಾಸಿ ತರುಣರಿಗೆ ದೊಡ್ಡ ಗೋಜಲಿನಂತೆ ಕಾಣಿಸಿತು; ಅವರಿಗೆ ಇದೆಲ್ಲ ಅರ್ಥಹೀನ ವಾದಂತೆ ತೋರಿತು. ಆ ತರುಣ, ದುಭಾಷಿಯಾಗಿದ್ದ ನಮ್ಮ ಕವಿಮಿತ್ರರಿಗೆ ಹೇಳಿದನಂತೆ, "ನೋಡಿ, ನೀವು ಈ ಬಾಬೂಗೆ ಹೇಳಿ. ಇವರು ನಮಗೆ ಏನು ಮಾಡಿ ಎಂದು ಹೇಳುತ್ತಿದ್ದಾರೆಯೋ ನಾವು ಈಗ ಅದನ್ನೇ ಮಾಡುತ್ತಿದ್ದೇವೆ. ಎಲ್ಲ ದುಡಿಮೆಯೂ ಸುಖಕ್ಕೆ ತಾನೇ? ನಾವು ನೆನ್ನೆ ದುಡಿದಿದ್ದೇವೆ. ಇವತ್ತು ಸುಖ ಪಡುತ್ತಿದ್ದೇವೆ. ಈ ಸುಖ ಪಡಲು ನಾಳೆಗಾಗಿ ನಾವು ಏಕೆ ಕಾಯಬೇಕು? ನಮಗೆ ಬೇಕಾದ ಸುಖ ಈಗಲೇ ಇದೆ." ಇದೇ ಸುಖದ ರಹಸ್ಯ – ಆ ಆದಿವಾಸಿ ತರುಣನಂತೆ ತಮ್ಮಲ್ಲೇ ಇರುವ ಈ ರಹಸ್ಯವನ್ನು ಕಂಡುಕೊಂಡವರು ವಿರಳ.

– ಡಾ. ಹಾ.ಮಾ.ನಾಯಕ (ಆಧಾರ: ಸಂಗಾತಿ)